# ಯುವಜನರ ಸಾಂಗತ್ಯ ಖಾಲಿತನಕ್ಕೆ ಮದ್ದು

## ಮಲಯಾಳಂ ಕವಿ, ಚಿತ್ರಸಾಹಿತಿ ಅನ್ವರ್ ಅಲಿ ಜೊತೆ ಮಾತುಕತೆ

**ಮಹಮ್ಮದ್ ಶರೀಫ್ ಕಾಡುಮಠ**

ಫೋಟೊ: ಲವ

ಕವಿ ಹಾಗೂ ಸಿನಿಮಾ ಸಾಹಿತಿಯಾಗಿ ಪ್ರಸಿದ್ಧರಾದ ಕೇರಳದ ಅನ್ವರ್ ಅಲಿ, ಪ್ರಖರ ರಾಜಕೀಯ ಪ್ರಜ್ಞೆಯ ಅಭಿವ್ಯಕ್ತಿ ಹಾಗೂ ಸಾಮಾಜಿಕ ಚಟುವಟಿಕೆಗಳಿಂದಲೂ ಸುದ್ದಿಯಲ್ಲಿರುವವರು. ಅತ್ಯುತ್ತಮ ಸಿನಿಮಾ ಸಾಹಿತ್ಯ ರಾಜ್ಯ ಪ್ರಶಸ್ತಿಯೊಂದಿಗೆ, 'ಮೆಹಬೂಬ್ ಎಕ್ಸ್‌ಪ್ರೆಸ್' ಕವನ ಸಂಕಲನಕ್ಕಾಗಿ ಕೇರಳ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಅವರಿಗೆ ಸಂದಿದೆ. ಈಚೆಗೆ ಬಳ್ಳಾರಿಯಲ್ಲಿ ನಡೆದ 'ಸಂಗಂ' ವಿಶ್ವಕವಿ ಸಮ್ಮೇಳನದಲ್ಲಿ ಅನ್ವರ್ ಮಲಯಾಳಂ ಕವಿತೆ ವಾಚಿಸಿದ್ದರು. ಆ ಸಂದರ್ಭದಲ್ಲಿ ಮಾತಿಗೆ ಸಿಕ್ಕ ಅವರು, ತಮ್ಮ ಹೋರಾಟದ ಬದುಕು, ಕಾವ್ಯ ಮತ್ತು ಸಿನಿಮಾದ ಒಡನಾಟಗಳ ಕುರಿತು 'ಮಯೂರ'ಕ್ಕಾಗಿ ಮಾತನಾಡಿದರು.

ಬಾಲ್ಯದಲ್ಲಿ ಕವಿತೆ ಒಂದು ಅಚ್ಚರಿಯಂತೆ ಕಾಣಿಸುವುದು ಸಹಜ. ನನಗೂ ಹಾಗೇ ಅನ್ನಿಸಿತ್ತು. ಪಠ್ಯಪುಸ್ತಕಗಳಲ್ಲಿ ಬರುವ ಕವಿತೆಗಳನ್ನು ದೇವಲೋಕದಿಂದ ದೂತರು ಬಂದು ಬರೆದಿದ್ದಾರೇನೋ ಎಂದು ಭಾವಿಸುತ್ತಿದ್ದೆ. ಬೆಳೆಯುತ್ತಾ ಹೋದಂತೆ ಗೊತ್ತಾಗಿದ್ದು, ಕವಿಗಳು ದೇವದೂತರಲ್ಲ, ಪಿಶಾಚಿಗಳು ಅಂತ (ತಮಾಷೆಯ ನಗು).

ನನಗೆ ನೆನಪಿರುವಂತೆ ಮೊದಲ ಬಾರಿಗೆ ನನ್ನನ್ನು ಪ್ರಭಾವಿಸಿದವರು ಖ್ಯಾತ ಮಲಯಾಳಂ ಕವಯಿತ್ರಿ ಸುಗತಕುಮಾರಿ. ಅವರು ನವೋದಯ ಕಲಾ ಶಾಲೆಯ ಮುಖ್ಯಶಿಕ್ಷಕಿಯಾಗಿದ್ದರು. ಪಠ್ಯಪುಸ್ತಕದಲ್ಲಿ ಓದಿದ ಕವಿತೆಯನ್ನು ಬರೆದ ಕವಯಿತ್ರಿಯೊಬ್ಬರನ್ನು ಅದೇ ಮೊದಲ ಬಾರಿ ನೋಡಿದ್ದು. ಅಂದಿನಿಂದಲೇ ನನಗೆ ಕವಿಗಳೊಂದಿಗೆ ಒಂದು ಬಗೆಯ ಜನ್ಮಾಂತರ ಬಾಂಧವ್ಯದ ಅನುಭವ ದಕ್ಕಿದ್ದು.

ಆರಂಭದ ದಿನಗಳಲ್ಲಿ ನನಗೆ ಬರೆಯಬೇಕು ಅಂತ ಅನಿಸಿರಲಿಲ್ಲ. ನಮ್ಮ ಕುಟುಂಬದಲ್ಲಿ ಹಿಂದಿನಿಂದಲೂ